159 SL NO:-24 Dt:- 21/08/26

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಗೆ ಉತ್ತರಿಸುವ ಕುರಿತು.

### ಪ್ರಶ್ನೆ:

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಶಿಥಿಲ ವ್ಯವಸ್ಥೆಯಲ್ಲಿರುವ ಒಳಚರಂಡಿ ವ್ಯವಸ್ಥೆ ಮತ್ತು 24X7 ನೀರು ಸರಬರಾಜು ಮಾಡುವ ಜಲಸಿರಿ ಯೋಜನೆಗಳು ನನೆಗುದಿಗೆ ಬಿದ್ದಿದ್ದು, ಇದನ್ನು ಕೂಡಲೇ ಕೈಗೆತ್ತಿಕೊಳ್ಳುವಂತೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಕುರಿತು.

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿನ ಒಳಚರಂಡಿ ವ್ಯವಸ್ಥೆಯು ತೀರಾ ಹದಗೆಟ್ಟಿದ್ದು, ಎಸ್.ಟಿ.ಪಿ ಗಳು ಕಾರ್ಯನಿರ್ವಹಿಸದೇ ರಾಜ ಕಾಲುವೆಗಳಲ್ಲಿ ಒಳಚರಂಡಿ ನೀರು ಹರಿಯುತ್ತಿದ್ದು, ಈ ನೀರು ಸಾರ್ವಜನಿಕ ಕಾಲುವೆಗಳಲ್ಲಿ ಹರಿದು ನದಿಗಳಿಗೆ ಹರಿಸಲಾಗುತ್ತಿದ್ದು, ಇದರಿಂದ ಜಲಮೂಲಗಳು ಕಲುಷಿತಗೊಂಡು ಸಾರ್ವಜನಿಕ ತೆರೆದ ಬಾವಿಗಳು, ಕೆರೆಗಳು ನೀರು ಸಂಪೂರ್ಣ ಒಳಚರಂಡಿ ನೀರು ಹರಿದು ನಗರಪಾಲಿಕೆ ವ್ಯಾಪ್ತಿಯಲ್ಲಿ ಸೊಳ್ಳೆಗಳು ಮತ್ತಿತ್ತರ ಅಂಟುರೋಗ ಹರಡಿ ಸಾರ್ವಜನಿಕರು ಕಳೆದ 10 ವರ್ಷಗಳಿಂದ ದುರ್ವಾಸನೆ ಪಡೆದು ಬದುಕುತ್ತಿದ್ದಾರೆ ಎಂದು ಮಂಗಳೂರಿನ ಪ್ರಮುಖ ಪತ್ರಿಕೆಗಳು ವರದಿಯನ್ನು ಮಾಡಿದೆ.

ಇತ್ತೀಚಿನ ದಿನಗಳಲ್ಲಿ ಒಳಚರಂಡಿ ಸಂಸ್ಕರಣ ಘಟಕಗಳಿಗೆ ಬರುತ್ತಿರುವ ನೀರು, ಕುಡಿಯುವ ನೀರಿನ ಪೈಪ್‌ನೊಂದಿಗೆ ಜೋಡಣೆಗೊಂಡ ಸದರಿ ನೀರನ್ನು ಕುಡಿಯುವ ಬಹಳಷ್ಟು ಜನ ಅನಾರೋಗ್ಯದಿಂದ ಬಳಲುತ್ತಿರುವುದು ಮತ್ತು ಇದನ್ನು ಮಂಗಳೂರು ಮಹಾನಗರಪಾಲಿಕೆ ಒಪ್ಪಿ ಕಲುಷಿತ ನೀರು ಕುಡಿಯುವ ನೀರಿನ ಪೈಪ್‌ನೊಂದಿಗೆ ಸೇರಿಕೊಂಡಿರುವುದು ಆತಂಕದ ವಿಚಾರವಾಗಿದೆ. ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ಹಳೆಯ ಶಿಥಿಲ ವ್ಯವಸ್ಥೆಯಲ್ಲಿರುವ ಕೆಂಪುಕಲ್ಲಿನ ಮಶಿನ್ ಹೋಲ್‌ಗೂ ಸ್ಟೋನ್ವೇರ್ ಪೈಪ್‌ಗಳನ್ನು ಆರ್.ಸಿ.ಸಿ ಮಶಿನ್ ಹೋಲ್‌ಗೂ ಯು.ಪಿ.ವಿ.ಸಿ/ಆರ್.ಸಿ.ಸಿ/ಡಿ.ಐ ಗೆ ಬದಲಾಯಿಸಲು ಹಾಗೂ ಒಳಚರಂಡಿ ರಹಿತ ಪ್ರದೇಶದಲ್ಲಿ ಒಳಚರಂಡಿ ಜಾಲವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಎಸ್.ಟಿ.ಪಿಗಳ ಉನ್ನತೀಕರಣ ಮತ್ತು ವೆಟ್‌ವೆಲ್‌ಗಳ ನಿರ್ಮಾಣ, ಸಂಸ್ಕರಿಸಿದ ನೀರಿನ ಬಳಕೆ ಮಾಡಲು ಅಂದಾಜು ಮೊತ್ತ ರೂ.1250.00 ಕೋಟಿ ಅವಶ್ಯಕತೆ ಇರುತ್ತದೆ ಎಂದು ನಗರಪಾಲಿಕೆ ಅಂದಾಜು ಪಟ್ಟಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ಅಲ್ಲದೇ ಸರ್ಕಾರದ ಕರ್ನಾಟಕ ವಿಧಾನ ಮಂಡಲ ಸಾರ್ವಜನಿಕ ಉದ್ಯಮಗಳ ಸಮಿತಿಯು ಈ ಪ್ರದೇಶಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ ಈ ಕಾಮಗಾರಿಗಳು ತ್ವರಿತವಾಗಿ ಅನುಷ್ಠಾನಗೊಳಿಸಬೇಕೆಂದು ಸರ್ಕಾರಕ್ಕೆ ಸೂಚಿಸಿದೆ ಮತ್ತು ಇದರ ವರದಿ ಮಂಡನೆ ಆಗಿದೆ.

ಮಳೆಗಾಲದಲ್ಲಿಯೂ ಕುಡಿಯುವ ನೀರಿನ ರೇಷನಿಂಗ್ ನಡೆಯುತ್ತಿದೆ. ಪ್ರಸ್ತುತ ಮಂಗಳೂರು ಮಹಾನಗರಪಾಲಿಕ ವ್ಯಾಪ್ತಿಯಲ್ಲಿ 86 ಸಾವಿರ ನೀರಿನ ಸಂಪರ್ಕ ಹೊಂದಿಕೊಂಡಿದ್ದು, ಇದರ ಜೊತೆಗೆ 20 ಸಾವಿರಕ್ಕೂ ಹೆಚ್ಚು ಅಕ್ರಮವಾಗಿ ನೀರಿನ ಸಂಪರ್ಕ ಹೊಂದಿದೆ ಎಂಬ ಅಂಶವು ಒಂದು ಆತಂಕದ ಘಟನೆ ಆಗಿದೆ. ದಿನಕ್ಕೆ 170 ಎಂ.ಎಲ್.ಡಿ ನೀರು ಬೇಕಾಗಿರುವುದರಿಂದ ನೀರಿನ ಅಭಾವ ಉಂಟಾಗಿದೆ ಎಂದು ನಗರ ಪಾಲಿಕೆ ತಿಳಿಸಿದೆ.

ಆದುದರಿಂದ ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಪುನರ್ ನಿರ್ಮಾಣ ಕಾಮಗಾರಿ ಹಾಗೂ ಜಲಸಿರಿ ಯೋಜನೆ ಕುಡಿಯುವ ನೀರಿನ ಯೋಜನೆ ಶೀಘ್ರ ಪೂರ್ಣಗೊಳಿಸಿ ನಗರಪಾಲಿಕೆ ವ್ಯಾಪ್ತಿಯ ಜನರಿಗೆ ಮೂಲಭೂತ ಸೌಕರ್ಯ ಒದಗಿಸಿಕೊಡಬೇಕು. ಮಾನ್ಯ ಮಂತ್ರಿಗಳು ಕೂಡಲೇ ಮಂಗಳೂರಿಗೆ ಭೇಟಿ ನೀಡಿ ಸಮಸ್ಯೆ ಪರಿಹಾರಕ್ಕೆ ಕ್ರಮಕೈಗೊಳ್ಳಬೇಕು. ಇದೊಂದು ಸಾರ್ವಜನಿಕ ಮಹತ್ವವುಳ್ಳ ವಿಚಾರವಾಗಿರುವುದರಿಂದ ಸದನದ ಶೂನ್ಯ ವೇಳೆಯಲ್ಲಿ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯ ಬಯಸಿರುತ್ತಾರೆ.

**ಉತ್ತರ :**

ಮಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಮಂಗಳೂರು ನಗರದ ಒಳಚರಂಡಿ ವ್ಯವಸ್ಥೆಯನ್ನು ಉನ್ನತೀಕರಿಸಲು ರೂ.1250.00 ಕೋಟಿಗಳ ಪ್ರಸ್ತಾವನೆಯನ್ನು ಆಯುಕ್ತರು, ಮಂಗಳೂರು ಮಹಾನಗರ ಪಾಲಿಕೆ ರವರು ದಿನಾಂಕ:07.08.2025 ರಂದು ಪೌರಾಡಳಿತ ನಿರ್ದೇಶಕರಿಗೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯು ಪೌರಾಡಳಿತ ನಿರ್ದೇಶನಾಲಯದ ಹಂತದಲ್ಲಿ ಪರಿಶೀಲನೆಯಲ್ಲಿದ್ದು, ಪೌರಾಡಳಿತ ನಿರ್ದೇಶನಾಲಯದಿಂದ ಸರ್ಕಾರಕ್ಕೆ ಪ್ರಸ್ತಾವನೆ ಸ್ವೀಕೃತವಾದ ಕೂಡಲೇ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗುವುದು.

ಮಂಗಳೂರು ಮಹಾನಗರ ಪಾಲಿಕೆಯ ಹಳೆ ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿ 50 ವರ್ಷಗಳ ಹಳೆಯ ಕೆಂಪು ಕಲ್ಲಿನ ಮಶಿನ್‌ಹೋಲ್ ಮತ್ತು ಸ್ಟೋನ್‌ವೇರ್‌ಗಳಿಂದ ನಿರ್ಮಿಸಿರುವ ಒಳಚರಂಡಿ ಜಾಲವು ಇರುವುದರಿಂದ ಒಳಚರಂಡಿ ನೀರು ಮುಖ್ಯ ಚರಂಡಿಗಳಲ್ಲಿ ಹರಿಯುವುದರಿಂದ ಬಾವಿಗಳು ಹಾಳಾಗಿರುವ ಬಗ್ಗೆ ಸಾರ್ವಜನಿಕರುಗಳಿಂದ ದೂರುಗಳು ಬಂದಲ್ಲಿ, ಸದರಿ ಬಾವಿಗಳನ್ನು ಶುಚಿಗೊಳಿಸಲಾಗುತ್ತಿದೆ.

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಅಧಿಕೃತವಾಗಿ 93,000 ನೀರಿನ ಸಂಪರ್ಕ ಇದ್ದು ಅಧಿಕೃತ ಜೋಡಣೆ ಇರುತ್ತದೆ. ಮುಖ್ಯ ಕೊಳವೆ ಹಾದು ಬರುವ ಗ್ರಾಮಗಳಲ್ಲಿ ಅನಧಿಕೃತವಾಗಿ ಸಂಪರ್ಕ ಮಾಡಿರುತ್ತಾರೆ, ಹಲವಾರು ಬಾರಿ ಜೋಡಣೆ ಕಡಿತಗೊಳಿಸಲು ಮಹಾನಗರ ಪಾಲಿಕೆಯಿಂದ ಕ್ರಮವಹಿಸಲಾಗಿರುತ್ತದೆ. ಮಹಾನಗರ ಪಾಲಿಕೆಯಿಂದ ಹೊಸದಾಗಿ ಕಾರ್ಯನಿರ್ವಹಿಸುತ್ತರುವ 20 MLD ರೇಚಕ ಸ್ಥಾವರದಿಂದ 10 MLD ನೀರನ್ನು ಗ್ರಾಮಾಂತರ ಪ್ರದೇಶಕ್ಕೆ RWS ವತಿಯಿಂದ ನೀರು ಸರಬರಾಜು ಮಾಡಲಾಗುತ್ತಿದ್ದು ಅದಾಗ್ಯೂ ಕೆಲವೊಂದು ಅನಧಿಕೃತ ಜೋಡಣೆಗಳು ಕಂಡುಬಂದಿರುತ್ತದೆ. ಮಳೆಗಾಲದಲ್ಲಿ ವಿದ್ಯುತ್ ವೈಫಲ್ಯ, ಹಳೆಯದಾದ ಮುಖ್ಯ ಕೊಳವೆ ಸೋರಿಕೆ ಉಂಟಾದ ಸಂದರ್ಭದಲ್ಲಿ ಹಾಗೂ ನೀರಿನ ಪ್ರಕ್ಷುಬ್ಧತೆ (turbidity) ಅಧಿಕವಾಗಿರುವುದರಿಂದ ನೀರಿನ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿರುತ್ತದೆ.

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (KUIDFC)ದ ವತಿಯಿಂದ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ (KIUWMIP) ಜಲಸಿರಿ ಯೋಜನೆಯಡಿ ಎಡಿಬಿ, ರಾಜ್ಯ ಸರ್ಕಾರ ಮತ್ತು ನಗರ ಸ್ಥಳೀಯ ಸಂಸ್ಥೆ ನೆರವಿನೊಂದಿಗೆ 24X7 ನೀರು ಸರಬರಾಜು ಯೋಜನೆಯನ್ನು ಕೈಗೊಳ್ಳಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ. ಕಾಮಗಾರಿಯ ವಿವರ ಈ ಕೆಳಗಿನಂತಿದೆ.

- ಕಾಮಗಾರಿ ಮೊತ್ತ : ರೂ 587.67 ಕೋಟಿಗಳು
- ಪರಿಷ್ಕೃತ ಕಾಮಗಾರಿ ಮೊತ್ತ : ರೂ 617.22 ಕೋಟಿಗಳು
- 8 ವರ್ಷಗಳ ಕಾ&ನಿ ಮೊತ್ತ : ರೂ 204.75 ಕೋಟಿಗಳು

- ಗುತ್ತಿಗೆದಾರರು : M/s. SUEZ Projects Pvt. Ltd., - DRS Infratech Pvt. Ltd., (JV)
- ಕಾಮಗಾರಿಯ ಪ್ರಾರಂಭ ದಿನಾಂಕ : 24.12.2019
- ಕಾಮಗಾರಿಯ ಮುಕ್ತಾಯ ದಿನಾಂಕ: 24.05.2023 (ಗುತ್ತಿಗೆ ಕರಾರಿನನ್ವಯ)
- ಕಾಮಗಾರಿಯನ್ನು ಮುಕ್ತಾಯಗೊಳಿಸಲು ವಿಸ್ತರಿಸಿದ ದಿನಾಂಕ: 31.03.2027

**ಕಾಮಗಾರಿ ವಿಳಂಭವಾಗಲು ಪ್ರಮುಖ ಕಾರಣಗಳು:**

- ಪ್ರಾರಂಭದಲ್ಲಿ ಕೋವಿಡ್-19 ಕಾರಣದಿಂದ ಸುಮಾರು 2 ವರ್ಷ ವಿಳಂಭವಾಗಿರುತ್ತದೆ.
- ರಾಷ್ಟ್ರೀಯ ಹೆದ್ದಾರಿ, ರೈಲ್ವೇ ಇಲಾಖೆ ಅನುಮತಿ ನೀಡುವುದು ವಿಳಂಬವಾಗಿರುವುದರಿಂದ.
- ನೆಲಮಟ್ಟದ ಜಲಸಂಗ್ರಹಗಾರ ಮತ್ತು ಮೇಲ್ಮಟ್ಟದ ಜಲಸಂಗ್ರಹಗಾರ ನಿರ್ಮಾಣಕ್ಕೆ ಅಗತ್ಯವಿರುವ ಸ್ಥಳವನ್ನು NMPA ಹಾಗೂ ಖಾಸಗಿ ಜಮೀನು ಮಾಲೀಕರಿಂದ ಪಡೆಯಲು ಭೂಸ್ವಾಧೀನ ಪ್ರಕ್ರಿಯೆ ವಿಳಂಭವಾಗಿರುತ್ತದೆ.
- ಮಳೆಗಾಲದಲ್ಲಿ ಕಾಮಗಾರಿಯ ಮಣ್ಣು ಅಗೆತಕ್ಕೆ ಜಿಲ್ಲಾಡಳಿತದಿಂದ ಅನುಮತಿ ದೊರೆಯದ ಕಾರಣ.
- ಗುತ್ತಿಗೆದಾರರಿಂದ ಅಗತ್ಯವಿರುವ Machinary ಮತ್ತು Labour ಒದಗಿಸದೆ ಇರುವುದು. ಗುತ್ತಿಗೆದಾರರ ಕಾರಣದಿಂದಾಗಿ ಕಾಮಗಾರಿ ವಿಳಂಬವಾಗಿರುತ್ತದೆ. ಆದ್ದರಿಂದ ಗುತ್ತಿಗೆದಾರರಿಗೆ ರೂ. 18 ಲಕ್ಷ ದಂಡ (liquidity damages) ವಿಧಿಸಲಾಗಿರುತ್ತದೆ.

ಕಡತ ಸಂಖ್ಯೆ: ನಅಇ 176 ಪಿ.ಆರ್.ಜೆ 2026

(ಡಾ. ಯತೀಂದ್ರ ಸಿದ್ದರಾಮಯ್ಯ)
ನಗರಾಭಿವೃದ್ಧಿ ಸಚಿವರು